ಹೆಂಡತಿ: ಅಕಸ್ಮಾತ್ ನಾನು ಸತ್ತು ಹೋದರೆ ಆಗ ನೀವೇನು ಮಾಡ್ತೀರಾ?
ಗುಂಡ: ಮಾಡೋದೇನು ನಾನೂ ಕೂಡಾ ಸತ್ತುಹೋಗ್ತೀನಿ.
ಹೆಂಡತಿ: ಅಯ್ಯೋ ಯಾಕ್ರೀ ಹಾಗಂತೀರಾ?
ಗುಂಡ: ಮತ್ತಿನ್ನೇನು ಯಾರಿಗೆ ಗೊತ್ತು ಖುಷಿಗೆ ಹಾರ್ಟ್ ಅಟ್ಯಾಕ್ ಆದರೂ ಆಗಬಹುದು.

★★★

ಟೀಚರ್: ಸಮುದ್ರ ದಾಟಿ ಹೊರ ದೇಶಕ್ಕೆ ಹೋದ ಮೊದಲ ಭಾರತೀಯ ಮಹಿಳೆ ಯಾರು?
ಗುಂಡ: ಸೀತಾದೇವಿ ಇರಬೇಕು ಟೀಚರ್! ಯಾಕೇಂದ್ರೆ ರಾವಣನ ಜೊತೆ ಲಂಕೆಗೆ ಹೋದವಳು ಅವಳೇ ತಾನೇ?

★★★

ಗುಂಡ: ಅಕಸ್ಮಾತ್ ನನಗೆ ಲಾಟರಿಯಲ್ಲಿ ದುಡ್ಡು ಬಂದರೆ ಏನು ಮಾಡ್ತೀಯಾ?
ಹೆಂಡತಿ: ಅರ್ಧ ಹಣ ತೆಗೆದುಕೊಂಡು ನನ್ನ ತವರು ಮನೆಗೆ ಹೋಗಿಬಿಡ್ತೀನಿ. ನೀವು ಆರಾಮವಾಗಿರಿ. ನಾನೂ ಸುಖವಾಗಿರ್ತೀನಿ.
ಗುಂಡ: ಅರೆ ಹೌದಾ! ವೆರಿ ಗುಡ್. ನಿನ್ನೆ ಲಾಟರಿಯಲ್ಲಿ ನನಗೆ 40 ರೂಪಾಯಿ ಬಂದಿದೆ. ತಗೋ 20 ರೂಪಾಯಿ. ಈಗಲೇ ತವರು ಮನೆಗೆ ಹೊರಟುಬಿಡು.

★★★

ಗೆಳೆಯ: ಅಲ್ಲಾ ಇಷ್ಟು ಚಿಕ್ಕ ವಯಸ್ಸಿಗೇ ನಿನ್ನ ಮಗ ಎಷ್ಟೊಂದು ಮಾತಾಡ್ತಾನಲ್ಲ. ಮುಂದೆ ಅವನು ಏನಾಗಬಹುದೂಂತ ಅಂದುಕೊಂಡಿದ್ದೀಯಾ?
ಗುಂಡ: ಸ್ಪೀಕರ್.

★★★

ಗುಂಡ: ನಿನಗೆ ಒಂದು ವಿಷಯ ಗೊತ್ತಾ?
ಗೆಳೆಯ: ಇಲ್ಲ ಅದೇನು ಹೇಳು.
ಗುಂಡ: ನನ್ನ ಹೆಂಡತಿ ಯಾವುದೇ ಬೇಡಿಕೆ ಪಟ್ಟಿ ಕೊಡಲಿ ಅದು ಹನುಮಂತನ ಬಾಲದ ತರಹ ತುಂಬಾ ಉದ್ದ ಇರುತ್ತದೆ.
ಗೆಳೆಯ: ಅಯ್ಯೋ ಯಾಕೆ?
ಗುಂಡ: ಯಾಕಂದ್ರೆ ಅವಳ ತಂದೆಯ ಹೆಸರು ಹನುಮಂತರಾಯ.

★★★



ಕಣ್ಣಿನ ಡಾಕ್ಟರ್: ನೀವು ನಿಮ್ಮ ಗಂಡನನ್ನು ಹೇಗೆ ನೋಡ್ತೀರೋ ಹಾಗೆಯೇ ಒಮ್ಮೆ ದೊಡ್ಡದಾಗಿ ಕಣ್ಣುಬಿಡಿ.
ಗುಂಡನ ಹೆಂಡತಿ: ಯಾಕೆ ಡಾಕ್ಟ್ರೇ?
ಕಣ್ಣಿನ ಡಾಕ್ಟರ್: ಕಣ್ಣಿಗೆ ಡ್ರಾಪ್ ಹಾಕಬೇಕಮ್ಮ ಅದಕ್ಕೆ.

ವಕೀಲ: ಡೈವೋರ್ಸ್‌ಗೆ 50 ಸಾವಿರ ಖರ್ಚಾಗುತ್ತೆ.
ಗುಂಡ: ‘ಅಲ್ಲಾ ಸಾರ್ ನಮ್ಮ ಪುರೋಹಿತರು 10 ಸಾವಿರಕ್ಕೆ ನನ್ನ ಮದುವೆ ಮಾಡಿಸಿದ್ದರು. ಈಗ ನೀವು ನೋಡಿದರೆ ಇಷ್ಟೊಂದು ದುಡ್ಡು ಕೇಳ್ತೀರಲ್ಲ?
ವಕೀಲ: ಗೊತ್ತಾಯ್ತು. ಕಡಿಮೆ ಖರ್ಚಿನ ಫಲಿತಾಂಶ ಏನಂತ.

(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು

ಭಿಕ್ಷುಕ: ತಗೊಳಿ ಸರ್, ಆಸ್ಪತ್ರೆ ಬಿಲ್, ಇವತ್ತೇ ಸೆಟ್ಲ್ ಮಾಡಿ.
ರಾವ್: ನಿನ್ನ ಆಸ್ಪತ್ರೆ ಬಿಲ್ ನಾನ್ಯಾಕೋ ಸೆಟ್ಲ್ ಮಾಡಬೇಕು.
ಭಿಕ್ಷುಕ: ಇನ್ನ್ಯಾರು ಸೆಟ್ಲ್ ಮಾಡ್ತಾರೆ, ಅಮ್ಮಾವರು ಊರಿಗೆ ಹೋಗಿರುವಾಗ ನೀವು ಮಾಡಿದ ದರಿದ್ರ ಅಡುಗೆ ತಿಂದು ತಾನೇ ನಾನು ಕಾಯಿಲೆ ಬಿದ್ದಿದ್ದು.

★★★

ಪತ್ನಿ: ಬ್ಯಾಂಕಿಗೆ ಹೋಗಿ ದುಡ್ ಡ್ರಾ ಮಾಡ್ಕೊಂಡು ಬನ್ನಿ ಅಂದ್ರೆ, ಏನ್ರೀ ಅದು ಡ್ರಾಮಾ ಮಾಡ್ತಿದೀರಾ.
ಪತಿ: ಬ್ಯಾಂಕಿನ ಕ್ಲರ್ಕು ನಳಿನಿ ಮೂರು ದಿನ ರಜಾ ಅಂತೆ ಕಣೆ. ಅವಳು ಬಂದ್ಮೇಲೆ ಹೋಗ್ತೀನಿ.

★★★

ಪತ್ನಿ: ರೀ ಗ್ರಹಚಾರ ಅಂದ್ರೆ ಏನ್ರೀ?
ಪತಿ: ಸಿಂಪಲ್ ಆಗಿ ಹೇಳಬೇಕಂದ್ರೆ, ನಮ್ಮ ಮನಸ್ಸಿಗೆ ಹಿಡಿಸದಿದ್ದನ್ನು ಇಡೀ ಜೀವಮಾನ ಕಟ್ಕೊಂಡು ಅನುಭವಿಸೋದು.
ಪತ್ನಿ: ಹಾಗಂದ್ರೆ.
ಪತಿ: ಈಗ ನೀನು ನನಗೆ ಇದ್ದೀಯಲ್ಲ. ಅದೇ ಗ್ರಹಚಾರ.

★★★

ಶೀಲಾ: ಸರ್, ನನ್ನ ಗಂಡನ್ನ ವಾಪಸ್ ಕರೆಸಿಕೊಡಿ.
ಪೊಲೀಸು: ಅಲ್ಲಮ್ಮ, ಅವರ ಜೊತೆ ಜಗಳವಾಡಿ ಮನೆ ಬಿಟ್ಟು ಹೋಗೋ ಹಾಗೆ ಮಾಡಿದ್ದೇ ನೀವು. ಈಗ ನಿಮಗೆ ಗಂಡ ಯಾಕೆ ಬೇಕು.
ಶೀಲಾ: ಅದು ನಾನು ಜಗಳ ಆಡಿ ಮೂರು ದಿವಸ ಆಯ್ತು ಸರ್. ನನಗೆ ಮನೇಲಿ ಜಗಳ ಆಡೋಕೆ ಒಬ್ಬರು ಬೇಕೇ ಬೇಕು ಸರ್.

(ಸಂಗ್ರಹ) ಸುಕೇಶವ, ಬೆಂಗಳೂರು


ಸರ್ವೇಜನಃ ಸುಖಿನೋ ಭವಂತುಃ
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.